**ದಿನಾಂಕ: 16-07-2022 ರಂದು ಬೆಳಗ್ಗೆ 11:30 ಗಂಟೆಗೆ ವಾರ್ಡ್ ಸಂಖ್ಯೆ 165 ಗಣೇಶ ಮಂದಿರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀ. ಟಿ. ಎನ್. ತ್ಯಾಗರಾಜು – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಮೋಹಿತ್. ಆರ್ – ಸಹಾಯಕ ಅಭಿಯಂತರರು (ವಾರ್ಡ್ 165 ಗಣೇಶ ಮಂದಿರ) (ಕಿಯೋನಿಕ್ಸ್)
3. ಶ್ರೀ. ಸೋಮಶೇಖರ್ – ಹಿ.ಆ.ಪ (ವಾರ್ಡ್ 165 ಗಣೇಶ ಮಂದಿರ)

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 165 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು (ಕಿಯೋನಿಕ್ಸ್) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ವಾರ್ಡ್‌ನ ಬನಶಂಕರಿ 2ನೇ ಹಂತದಲ್ಲಿರುವ 30ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ಪೈಪ್‌ಗಳು ಹಾಳಾಗಿ ನೀರು ಸೋರುವಿಕೆ ಸಮಸ್ಯೆ ಉಂಟಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸದರಿ ರಸ್ತೆಯ ಒಳಚರಂಡಿ ಪೈಪ್‌ಗಳನ್ನು ಸರಿಪಡಿಸಲಾಗಿರುತ್ತದೆ ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ರವರು ತಿಳಿಸಿದರು.

ವಾರ್ಡ್ ವ್ಯಾಪ್ತಿಯ 21ನೇ ಮುಖ್ಯರಸ್ತೆಯಲ್ಲಿರುವ ಬಿಡಿಎ ಕಾಂಪ್ಲೆಕ್ಸ್‌ನ ಫರ್ಸ್ಟ್ ಕಾಫಿ ಅಂಗಡಿ ಮುಂಭಾಗದಲ್ಲಿ ಅಂಗಡಿಯವರು ಪಾದಚಾರಿ ಮಾರ್ಗವನ್ನು ಆಕ್ರಮಿಸಿರುತ್ತಾರೆ. ಇದರಿಂದ ಪಾದಚಾರಿಗಳಿಗೆ ಓಡಾಡಲು ತೊಂದರೆಯಾಗಿರುತ್ತದೆ. ಆದ್ದರಿಂದ ಸದರಿಯನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ.

ರೆಫೆರಲ್ ಆಸ್ಪತ್ರೆ ಬಳಿ ಬೃಹತ್ ನೀರು ಗಾಲುವೆ ರವರ ವಿಭಾಗ ವತಿಯಿಂದ ಚರಂಡಿ ಮಾಡುವಾಗ ರಸ್ತೆಯಲ್ಲಿ ಗುಂಡಿಯಾಗಿರುತ್ತದೆ ಎಂದು ಕೋರಿದ್ದರ ಮೇರೆಗೆ ಸದರಿ ರಸ್ತೆಗೂಂಡಿಯನ್ನು ಸರಿಪಡಿಸಲಾಗಿರುತ್ತದೆ ಎಂದು ತಿಳಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ ಮಾಜಿ ಪಾಲಿಕೆ ಸದಸ್ಯರ ಭಾವಚಿತ್ರವಿರುವ ಬ್ಯಾನರ್‌ತೆರವುಗೊಳಿಸಲು ಸೂಚಿಸಲಾಯಿತು. ಅದರಂತೆ ಕ್ರಮವಹಿಸಲು ಸಹಾಯಕ ಅಭಿಯಂತರರು ರವರಿಗೆ ಸೂಚಿಸಲಾಯಿತು.

ವಾರ್ಡ್ ವ್ಯಾಪ್ತಿಯ 21ನೇ ಮುಖ್ಯರಸ್ತೆಯಲ್ಲಿರುವ ಬಿಡಿಎ ಕಾಂಪ್ಲೆಕ್ಸ್ ರವರು ಕಸವನ್ನು ರಸ್ತೆಗೆ ಸುರಿಯುತ್ತಿರುತ್ತಾರೆ ಎಂದು ದೂರು ಬಂದಿರುತ್ತದೆ. ಸದರಿ ಕಸವನ್ನು ಕಾಂಪ್ಲೆಕ್ಸ್ ರವರೇ ವಿಲೇವಾರಿ ಮಾಡುವಂತೆ ನೋಟೀಸ್ ನೀಡಲು ಸೂಚಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ ಇರುವ ರಸ್ತೆಗುಂಡಿಗಳು ಮುಚ್ಚುವ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ ಎಂದು ಸಾರ್ವಜನಿಕರಿಗೆ ತಿಳಿಸಲಾಯಿತು.

ಪು.ತಿ.ನೋ

ವಾರ್ಡ್ ವ್ಯಾಪ್ತಿಯಲ್ಲಿ ತುಂಬಾ ಹಾಳಗಿರುವ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಲಾಗುತ್ತಿರುತ್ತದೆ ಎಂದು ಸಹಾಯಕ ಅಭಿಯಂತರರು ರವರು ತಿಳಿಸಿದರು.

ವಾರ್ಡ್ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ ರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿನ ಮೂಲಭೂತ ಸೌಕರ್ಯಗಳಾದ ರಸ್ತೆಗುಂಡಿ ಮುಚ್ಚುವಿಕೆ, ಕಟ್ಟಡ ತ್ಯಾಜ್ಯ ವಿಲೇವಾರಿ, ಘನತ್ಯಾಜ್ಯ ವಿಲೇವಾರಿ, ಬೆಸ್ಕಾಂ ಸಂಬಂಧಿತ, ಜಲಮಂಡಳಿ ಸಂಬಂಧಿತ, ಆರೋಗ್ಯ ಇಲಾಖೆ ಹಾಗೂ ಇನ್ನಿತರೆ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಮರ್ಪಕ ಕಾರ್ಯನಿರ್ವಹಣೆಯ ಬಗ್ಗೆ ಆಯಾ ಇಲಾಖೆಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಸದಸ್ಯರಿಗೆ ವಿವರಿಸಿದರು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಶ್ರೀ. ತ್ಯಾಗರಾಜು, ಅಧ್ಯಕ್ಷರು ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

16/07/22

ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ 165
ಗಣೇಶ ಮಂದಿರ